# 2021-22 ನೇ ಸಾಲಿನ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ
# ಎನ್.ಎಫ್.ಎಸ್.ಎಂ- ಎಣ್ಣೆಕಾಳು ಬೆಳೆಗಳ ಮಾರ್ಗಸೂಚಿಗಳು

*ಜಕೃನಿ/ರಾ.ಆ.ಭ.ಅ-ಎಣ್ಣೆಕಾಳು ಬೆಳೆಗಳು/ಮಾರ್ಗಸೂಚಿ/2021-22* ದಿನಾಂಕ: 11-06-2021

ಎಣ್ಣೆಕಾಳು ಬೆಳೆಗಳಲ್ಲಿ ಉತ್ಪಾದನೆಯನ್ನು ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ- ಎಣ್ಣೆಕಾಳು ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಸದರಿ ಯೋಜನೆಯನ್ನು ಶೇಕಡ 60:40 ರ ಕೇಂದ್ರ ಹಾಗೂ ರಾಜ್ಯದ ಪಾಲಿನ ಅನುದಾನ ಬಳಸಿ ಅನುಷ್ಠಾನ ಮಾಡಲಾಗುತ್ತಿದೆ.

**ಅನುಷ್ಠಾನ ಜಿಲ್ಲೆಗಳು:** (25) ಬಾಗಲಕೋಟೆ, ಬೆಂಗಳೂರು (ಗ್ರಾ&ನಗರ), ಬೆಳಗಾವಿ, ಬಳ್ಳಾರಿ, ಬೀದರ್, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಕಲಬುರಗಿ, ಹಾಸನ, ಹಾವೇರಿ, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ರಾಮನಗರ, ಶಿವಮೊಗ್ಗ, ತುಮಕೂರು, ವಿಜಯಪುರ ಮತ್ತು ಯಾದಗಿರಿ.

**ಯೋಜನೆಯ ಉದ್ದೇಶಗಳು:**

1) ಆಯ್ಕೆ ಮಾಡಿರುವ ಜಿಲ್ಲೆಗಳಲ್ಲಿ ಎಣ್ಣೆಕಾಳು ಬೆಳೆಗಳಲ್ಲಿ ಕ್ಷೇತ್ರ ವಿಸ್ತೀರ್ಣ ಹಾಗೂ ಉತ್ಪಾದಕತೆ ಹೆಚ್ಚು ಮಾಡುವ ಮುಖಾಂತರ ಹೆಚ್ಚು ಉತ್ಪಾದನೆಯನ್ನು ಸಾಧಿಸುವುದು.
2) ಕ್ಷೇತ್ರ ಮಟ್ಟದಲ್ಲಿ ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಸ್ಥಿರಗೊಳಿಸುವುದು.
3) ಕ್ಷೇತ್ರ ಮಟ್ಟದಲ್ಲಿ ಕೃಷಿ ಆದಾಯ ಹೆಚ್ಚಿಸುವುದರ ಮೂಲಕ ರೈತರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸುವುದು.

**ಯೋಜನೆಯ ಪ್ರಮುಖ ಘಟಕಗಳು**

1. ಬೀಜ ಘಟಕ
2. ಗುಚ್ಛ ಪ್ರಾತ್ಯಕ್ಷತೆಗಳು & ರೈತರ ತರಬೇತಿಗಳು
3. ಉತ್ಪಾದನಾ ಪರಿಕರಗಳ ವಿತರಣೆ
4. ಸಂಪನ್ಮೂಲ ಸಂರಕ್ಷಣಾ ತಾಂತ್ರಿಕತೆಗಳು (Flexi components)
5. ಯೋಜನಾ ನಿರ್ವಹಣಾ ವೆಚ್ಚ

**ಫಲಾನುಭವಿಗಳು ಮತ್ತು ಕ್ಷೇತ್ರ ಆಯ್ಕೆಗೆ ಮಾನದಂಡಗಳು:**

- ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯ ಅನುಷ್ಠಾನ ಕುರಿತು ಭಾರತ ಸರ್ಕಾರದ ನಿರ್ಣಯದಂತೆ ಯೋಜನೆಯ ಒಟ್ಟಾರೆ ಅನುದಾನದಲ್ಲಿ ವಿಶೇಷ ಘಟಕ ಯೋಜನೆಗೆ ಮತ್ತು ಗಿರಿಜನ ಉಪ ಯೋಜನೆಗೆ ಮೀಸಲಿರಿಸಿರುವ ಅನುದಾನವನ್ನು ಆಯಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಮತ್ತು ಭೂ ಹಿಡುವಳಿಯನ್ನಾಧರಿಸಿ ನಿಗದಿಪಡಿಸಿ ಬಿಡುಗಡೆಗೊಳಿಸಲಾಗುವುದು.
- ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುದಾನದ ಕನಿಷ್ಠ ಶೇ.33 ರಷ್ಟನ್ನು ಮೀಸಲಿರಿಸುವುದು.
- ಮಹಿಳಾ ರೈತರಿಗೆ ಅನುದಾನದ ಕನಿಷ್ಠ ಶೇ.33 ರಷ್ಟನ್ನು ಮೀಸಲಿರಿಸುವುದು.
- ಅಧ್ಯಕ್ಷರು, ಜಿಲ್ಲಾಮಟ್ಟದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಎಣ್ಣೆಕಾಳು ಕಾರ್ಯಕಾರಿ ಸಮಿತಿ ಇವರಿಂದ ರಚಿಸಲ್ಪಟ್ಟ ಬೀಜ ಸಮಿತಿಯು ಜಿಲ್ಲೆಯಲ್ಲಿ ಬಂದಿರುವ ಬೀಜ ಬೇಡಿಕೆ, ವಿತರಣೆ ಮತ್ತು ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸುವುದು. ಬಿತ್ತನೆ ಬೀಜ ಸಹಾಯಾನುದಾನವು ಕೇಂದ್ರ ಮಟ್ಟದಲ್ಲಿ ವಿತರಣೆಯಾಗಿದ್ದಲ್ಲಿ ವಿತರಣೆಯ ನಂತರ ಫಲಾನುಭವಿಗಳ ಪಟ್ಟಿಯನ್ನು ಐಚ್ಛಿಕವಾಗಿ ಪರಿಶೀಲಿಸಿ ಅನುಮೋದಿಸುವುದು.
- ಪ್ರಾತ್ಯಕ್ಷಿಕೆಗಳು, ರೈತ ತರಬೇತಿಗಳನ್ನು ಏರ್ಪಡಿಸುವುದು ಮತ್ತು ಮೌಲ್ಯಮಾಪನವನ್ನು ಕೈಗೊಳ್ಳುವಲ್ಲಿ ಕೃಷಿ ವಿಶ್ವವಿದ್ಯಾಲಯದ ವಲಯ ಸಂಶೋಧನಾ ಕೇಂದ್ರಗಳು, ಕೃಷಿ ವಿಜ್ಞಾನ ಕೇಂದ್ರಗಳು, ATMA, NGO ಗಳು ಮತ್ತು ಸಹ ಇಲಾಖೆಗಳೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಕ್ರಮವಹಿಸುವುದು.
- ಜಿಲ್ಲಾ ಮಟ್ಟದ ಯೋಜನಾ ನಿರ್ವಹಣೆ ತಂಡವು ಸಂಶೋಧನಾ ಕೇಂದ್ರಗಳು ಮತ್ತು ಸಹ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಉದ್ದೇಶಿತ ಫಲಿತಾಂಶವನ್ನು ಪಡೆಯಲು ಸಹಕರಿಸುವುದು.

**2021-22 ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ – ಎಣ್ಣೆಕಾಳು ಅಡಿಯಲ್ಲಿ ಅನುಸರಿಸಬೇಕಾದ ಪ್ರಮುಖ ಘಟಕಗಳ ಮಾರ್ಗಸೂಚಿಗಳು ಈ ಕೆಳಗಿನಂತಿರುತ್ತದೆ.**

- ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳನ್ನು ಗುಚ್ಛ ಪ್ರಾತ್ಯಕ್ಷಿಕೆಗಳಾಗಿ, ಪ್ರತಿ ಜಿಲ್ಲೆಯಲ್ಲಿ ಏರ್ಪಡಿಸುವಂತೆ ಯೋಜಿಸಲಾಗಿದ್ದು, ಪ್ರಾತ್ಯಕ್ಷಿಕೆಗಾಗಿ ಕೃಷಿ ಪರಿಕರಗಳೊಂದಿಗೆ ಸುಧಾರಿತ ತಳಿಗಳ ಬಿತ್ತನೆ ಬೀಜವನ್ನು ರೈತರಿಗೆ ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಹತ್ತು ವರ್ಷಗಳಿಂದೀಚೆಗೆ ಬಿಡುಗಡೆಯಾದ ತಳಿಗಳ ಬಿತ್ತನೆ ಬೀಜಗಳನ್ನು ಮಾತ್ರ ವಿತರಿಸಲು ಅವಕಾಶವಿರುತ್ತದೆ.
- ಪ್ರಮಾಣಿತ ಬಿತ್ತನೆ ಬೀಜ ವಿತರಿಸಲು ಉದ್ದೇಶಿಸಿರುವ ಬೀಜಗಳು ಕಡ್ಡಾಯವಾಗಿ 10 ವರ್ಷದೊಳಗೆ ಅಧಿಕೃತವಾಗಿ ಬಿಡುಗಡೆಯಾಗಿರುವ ತಳಿಗಳಾಗಿದ್ದು ಪ್ರಮಾಣೀಕರಣ ಗೊಂಡಿರಬೇಕು.

## ಯೋಜನೆಯ ಪ್ರಮುಖ ಘಟಕಗಳು

### I. ಬೀಜಘಟಕ

### 1. ತಳಿ ವರ್ಧಕ ಬಿತ್ತನೆ ಬೀಜ ಖರೀದಿ, ಮೂಲ ಬೀಜ ಹಾಗೂ ಪ್ರಮಾಣಿತ ಬೀಜ ಉತ್ಪಾದನೆಗೆ ಸಹಾಯಧನ

ಕೇಂದ್ರ ಸರ್ಕಾರವು ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳು, ಇತರೆ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಿಂದ ಹಾಗೂ ಸಂಶೋಧನಾ ಕೇಂದ್ರಗಳಿಂದ ತಳಿವರ್ಧಕ ಬಿತ್ತನೆ ಬೀಜವನ್ನು ಖರೀದಿಸುವ ಬೀಜ ಸಂಸ್ಥೆಗಳಿಗೆ ಮತ್ತು ಇಲಾಖಾ ಬೀಜೋತ್ಪಾದನಾ ಕೇಂದ್ರಗಳಿಗೆ ಖರೀದಿಸಿದ ಬೀಜಕ್ಕೆ ಪೂರ್ತಿ ಹಣವನ್ನು ಮರುಪಾವತಿ ಮಾಡಲು ಕೇಂದ್ರ ಸರ್ಕಾರವು ನೀಡಿರುವ ಆದೇಶದಂತೆ ನೀಡಲಾಗುವುದು.

ಹತ್ತು ವರ್ಷಗೊಳಗಿನ ಮೂಲ ಬೀಜ ಹಾಗೂ ಪ್ರಮಾಣಿತ ಬೀಜ ಉತ್ಪಾದನೆಗೆ, ಕರ್ನಾಟಕ ರಾಜ್ಯದ ಸ್ವಾಯತ್ತ ಸಂಸ್ಥೆಗಳಾದ ರಾಜ್ಯ ಬೀಜ ನಿಗಮಗಳಿಗೆ ರೂ. 2500/- ಸಹಾಯಧನವನ್ನು ಪ್ರತಿ ಕ್ವಿಂಟಾಲ್ ಗೆ ನೀಡಲಾಗುವುದು. ಇದರಲ್ಲಿ ಶೇ 75 ರಷ್ಟು ರೈತರಿಗೆ ಸಹಾಯಧನ ಹಾಗೂ 25 ರಷ್ಟು ಸಂಸ್ಥೆಗಳಿಗೆ ಪ್ರಮಾಣೀಕರಣ ಹಾಗೂ ಉತ್ಪಾದನಾ ವೆಚ್ಚಗಳನ್ನು ಭರಿಸಲು ನೀಡಲಾಗುವುದು. ಸದರಿ ಘಟಕಗಳನ್ನು ಕೇಂದ್ರ ಕಛೇರಿಯಿಂದ ಅನುಷ್ಠಾನಗೊಳಿಸಲಾಗುವುದು.

### 2.ಪ್ರಮಾಣಿತ ಬಿತ್ತನೆ ಬೀಜ ವಿತರಣಾ ಕಾರ್ಯಕ್ರಮ

ಪ್ರಮಾಣಿತ ಬಿತ್ತನೆ ಬೀಜದ ಬಳಕೆಯನ್ನು ಹೆಚ್ಚು ಪ್ರಚಾರ ಪಡಿಸುವ ಸಲುವಾಗಿ ರೈತರು ಖರೀದಿಸುವ ಪ್ರತಿ ಕ್ವಿಂಟಾಲ್ ಪ್ರಮಾಣಿತ ಬೀಜಕ್ಕೆ ಬೀಜದ ಶೇ.50 ರಷ್ಟು ದರ ಅಥವಾ ಗರಿಷ್ಠ ರೂ.4000/- ಗಳ ಸಹಾಯಧನವನ್ನು, ಹೈಬ್ರಿಡ್ ತಳಿಗಳಿಗೆ ಶೇ.50ರಷ್ಟು ರಿಯಾಯಿತಿ ದರದಲ್ಲಿ ಪ್ರತಿ ಕ್ವಿಂಟಾಲ್ ಗೆ ರೂ.8000/- ಕ್ಕೆ ಮೀರದಂತೆ ವಿತರಿಸುವುದು. (ಸದರಿ ಪ್ರಮಾಣಿತ ಬಿತ್ತನೆ ಬೀಜ ವಿತರಣೆಯನ್ನು ಬೀಜ ವಿಭಾಗದ ದರ ಕರಾರಿನ ಅನ್ವಯ ಅನುಷ್ಠಾನಗೊಳಿಸುವುದು)

ಪ್ರಮಾಣಿತ ಬಿತ್ತನೆ ಬೀಜ ವಿತರಿಸಲು ಉದ್ದೇಶಿಸಿರುವ ಬೀಜಗಳು 10 ವರ್ಷದೊಳಗೆ ಅಧಿಕೃತವಾಗಿ ಬಿಡುಗಡೆಯಾಗಿರುವ ತಳಿಗಳಾಗಿದ್ದು ಪ್ರಮಾಣೀಕರಣಗೊಂಡಿರಬೇಕು ಹಾಗೂ 10 ವರ್ಷದ ಮೇಲ್ಪಟ್ಟ ತಳಿಗಳನ್ನು ಸಹ ಅನುಮೋದಿತ ಕ್ರಿಯಾಯೋಜನೆಯನ್ವಯ ಶೇ.50 ರಷ್ಟು ದರ ಅಥವಾ ಗರಿಷ್ಠ ರೂ.4000/- ಗಳ ಸಹಾಯಧನದಂತೆ ವಿತರಿಸುವುದು

### II. ಅ) ಪ್ರಾತ್ಯಕ್ಷಿಕೆಗಳು:

- ಎಣ್ಣೆ ಕಾಳು ಬೆಳೆಗಳಲ್ಲಿ ನೂತನ/ಸುಧಾರಿತ ಬೇಸಾಯ ಕ್ರಮಗಳನ್ನು ಅಳವಡಿಸಿ ಏಕ ಬೆಳೆ ಮತ್ತು ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು.
- ಪ್ರತಿ ಬೆಳೆಯ ಪ್ರಾತ್ಯಕ್ಷಿಕೆಗಳನ್ನು ಕನಿಷ್ಠ 10 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳುವುದು ಹಾಗೂ ಗುಚ್ಛ ಪ್ರಾತ್ಯಕ್ಷಿಕೆಯ (Cluster Demonstration) ಪದ್ಧತಿಯಲ್ಲಿ ಏರ್ಪಡಿಸುವುದು.

- ಪ್ರಾತ್ಯಕ್ಷಿಕೆಗಳಿಗೆ 10 ವರ್ಷಗಳ ಒಳಗಿನ ತಳಿ/ಸಂಕರಣಗಳನ್ನು ಬಳಸುವುದು
- ಪ್ರಾತ್ಯಕ್ಷಿಕೆ ಆಯೋಜನೆಯಲ್ಲಿ ಗ್ರಾಮ ಪಂಚಾಯಿತಿಯ ಸಹಕಾರದೊಂದಿಗೆ ಫಲಾನುಭವಿ ರೈತರನ್ನು ಆಯ್ಕೆ ಮಾಡುವುದು.
- ಪ್ರಾತ್ಯಕ್ಷಿಕೆಯನ್ನು ಆಯೋಜಿಸುವಾಗ ಪ್ರಾತ್ಯಕ್ಷಿಕೆ ಪ್ರದೇಶವನ್ನು ಎರಡು ಭಾಗಗಳಾಗಿ ವಿಂಗಡಿಸಿ ಒಂದು ಭಾಗದಲ್ಲಿ ಸುಧಾರಿತ ತಾಂತ್ರಿಕತೆಗಳನ್ನು ಅಳವಡಿಸುವುದು; ಮತ್ತೊಂದು ಭಾಗದಲ್ಲಿ ರೈತರು ಅಳವಡಿಸುವ ಪದ್ಧತಿಗಳೊಂದಿಗೆ ಚೆಕ್ ಪ್ಲಾಟ್ ಆಗಿ ನಿರ್ವಹಿಸುವುದು. ಕಡಿಮೆ ಇಳುವರಿ ಪ್ರದೇಶಗಳಿಗೆ ಆದ್ಯತೆ ನೀಡುವುದು.
- ಒಂದು ಗುಚ್ಛ ಪ್ರದೇಶದಲ್ಲಿ ಒಳಪಡುವ ಎಲ್ಲಾ ರೈತರನ್ನು ಪ್ರಾತ್ಯಕ್ಷಿಕೆಯಲ್ಲಿ ತೊಡಗಿಸುವುದು. ಪ್ರತಿ ರೈತರ ಗರಿಷ್ಠ 1.0 ಹೆ. ಪ್ರದೇಶವನ್ನು ಗುಚ್ಛದಲ್ಲಿ ಸೇರ್ಪಡೆಗೊಳಿಸುವುದು.
- ಎಣ್ಣೆಕಾಳು ಬೆಳೆಗಳಲ್ಲಿ ಅಂತರ ಬೆಳೆ/ಸುಧಾರಿತ ತಳಿಗಳ/ಕೂರಿಗೆ ಬಿತ್ತನೆ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.
- ಬೆಳೆ ಪದ್ಧತಿಗಳ ಪ್ರಾತ್ಯಕ್ಷಿಕೆಗಳನ್ನು ಅಂದರೆ ಎಣ್ಣೆಕಾಳು ಬೆಳೆ ಮುಖ್ಯ ಬೆಳೆಯಾಗಿ ಮತ್ತು ಅಂತರ ಬೆಳೆಯಾಗಿ ಆಯೋಜಿಸುವುದು.
- ಸುಧಾರಿತ ತಾಂತ್ರಿಕತೆಗಳ ಬಗ್ಗೆ ಸ್ಥಳೀಯ ಸಂಶೋಧನಾ ಕೇಂದ್ರ / ಕೃಷಿ ವಿಜ್ಞಾನ ಕೇಂದ್ರಗಳ ವಿಜ್ಞಾನಿಗಳೊಂದಿಗೆ ಸಮಾಲೋಚಿಸಿ ಅಂತಹ ತಾಂತ್ರಿಕತೆಗಳ ಕುರಿತು ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು.
- ಪ್ರಾತ್ಯಕ್ಷಿಕೆಯ ವಿವರಣಾ ಫಲಕ (Display board) ದಲ್ಲಿ ರೈತರ ಸಂಖ್ಯೆ, ಹಳ್ಳಿಯ ಹೆಸರು, ತಳಿ ಮತ್ತು ಪ್ರಾತ್ಯಕ್ಷಿಕೆಯ ವಿವರ, ಬಳಸಲಾದ ಪೋಷಕಾಂಶಗಳು, ಬಿತ್ತನೆ ಬೀಜ ಪ್ರಮಾಣ, ಬಳಸಲಾದ ಇತರೆ ಪರಿಕರಗಳು ಇತ್ಯಾದಿಗಳ ಬಗ್ಗೆ ಮಾಹಿತಿ ನಮೂದಿಸುವುದು.
- ಜಿಲ್ಲೆಯ ಪ್ರಾತ್ಯಕ್ಷಿಕೆಯ ಸಮಗ್ರ ವರದಿಯನ್ನು ನಿಯತಕಾಲಿಕವಾಗಿ ನಿಗದಿತ ನಮೂನೆಯಲ್ಲಿ ಕೇಂದ್ರ ಕಛೇರಿಗೆ ಕಳುಹಿಸುವುದು.
- ಬೆಳೆಯು ಕಾಳು ತುಂಬುವ ಹಂತದಲ್ಲಿರುವಾಗ (Pod filling stage) ಕ್ಷೇತ್ರೋತ್ಸವವನ್ನು ಆಯೋಜಿಸುವುದು.
- ಸದರಿ ಯೋಜನೆಯಡಿ ಕಾರ್ಯಕ್ರಮ ಹಮ್ಮಿಕೊಳ್ಳಲು ATMA ಸಿಬ್ಬಂದಿಯ ನೆರವನ್ನು ಪಡೆಯುವುದು.
- NFSM-Oilseeds ಪ್ರಾತ್ಯಕ್ಷಿಕೆಯ ವಿವರಗಳನ್ನು GPS Co-ordinate ಸಹಿತ ದಾಖಲಾತಿಗಳನ್ನೊಳಗೊಂಡ ಪ್ರತ್ಯೇಕ ವಹಿಯನ್ನು – ಆಯಾ ರೈತ ಸಂಪರ್ಕ ಕೇಂದ್ರಗಳಲ್ಲಿ ನಿರ್ವಹಿಸುವುದು.
- NFSM-Oilseeds ಯೋಜನೆಯಡಿ ಜಿಲ್ಲೆಯಲ್ಲಿ ಕೈಗೊಳ್ಳಲಾಗುವ ಎಲ್ಲಾ ಪ್ರಾತ್ಯಕ್ಷಿಕೆಗಳ ವಿವರಗಳನ್ನು ಕ್ರೋಢೀಕರಿಸಿ ಮಾಹಿತಿಯು ಸಕಾಲದಲ್ಲಿ ಲಭ್ಯವಿರುವಂತೆ ಕ್ರಮ ವಹಿಸುವುದು

**ಪ್ರಾತ್ಯಕ್ಷಿಕೆಗಳ ಅನುಷ್ಠಾನ:**

ಪ್ರಾತ್ಯಕ್ಷಿಕೆಗಳ ಉತ್ಪಾದನಾ ಪರಿಕರಗಳನ್ನು ರೈತ ಸಂಪರ್ಕ ಕೇಂದ್ರಗಳ ಮುಖಾಂತರ ಕಿರುಚೀಲ ಮಾದರಿಯಲ್ಲಿ (ಕಿಟ್) ವಿತರಿಸಲು ಕ್ರಮವಹಿಸುವುದು.

**ಮೊದಲನೆ ಹಂತ (ಕಿಟ್-1):** ಬಿತ್ತನೆ ಬೀಜ, ಬೀಜೋಪಚಾರ ಔಷಧಿ, ಜೈವಿಕ ಗೊಬ್ಬರ ಹಾಗೂ ಸಾವಯವ ಗೊಬ್ಬರಗಳನ್ನು ಮೊದಲನೆ ಹಂತದಲ್ಲಿ (ಮುಂಗಾರು ಬೆಳೆಗಳಿಗೆ ಜುಲೈ 15 ರೊಳಗೆ ಹಾಗೂ ಹಿಂಗಾರು ಬೆಳೆಗಳಿಗೆ ಅಕ್ಟೋಬರ್ ಅಂತ್ಯಕ್ಕೆ ಅಂತಿಮಗೊಳಿಸುವುದು)

**ಎರಡನೇ ಹಂತ (ಕಿಟ್-2):** ಕಳೆನಾಶಕ, ಎಲೆ ಮೇಲೆ ಸಿಂಪಡಿಸುವ ಲಘು ಪೋಷಕಾಂಶಗಳು, ಕೀಟನಾಶಕ (ಮುಂಗಾರು ಬೆಳೆಗಳಿಗೆ ಆಗಸ್ಟ 15ರ ರೊಳಗೆ ಹಾಗೂ ಹಿಂಗಾರು ಬೆಳೆಗಳಿಗೆ ನವೆಂಬರ್ ಅಂತ್ಯಕ್ಕೆ ಅಂತಿಮಗೊಳಿಸುವುದು)

**ಪ್ರಾತ್ಯಕ್ಷಿತೆಗಳ ಉಸ್ತುವಾರಿ ಮತ್ತು ದಾಖಲೀಕರಣ:**

ಪ್ರಾತ್ಯಕ್ಷಿತೆಗಳ ವಿವಿಧ ಘಟಕಗಳ ಅನುಷ್ಠಾನ, ಉಸ್ತುವಾರಿ ಮತ್ತು ದಾಖಲೀಕರಣಕ್ಕೆ ಸಂಬಂಧಿಸಿದಂತೆ ಈ ಕೆಳಗೆ ತಿಳಿಸಿರುವ ಸೂಚನೆಗಳನ್ನು ಪಾಲಿಸುವುದು.

- ಪ್ರಾತ್ಯಕ್ಷಿಕೆಗಳಿಗೆ ಆಯ್ಕೆ ಮಾಡಲಾಗುವ ಫಲಾನುಭವಿಗಳಿಗೆ ಇಲಾಖೆಯ ***ಕೆ-ಕಿಸಾನ್*** ತಂತ್ರಾಂಶದಲ್ಲಿ ರೈತರ ನೊಂದಣಿ ಕಡ್ಡಾಯ.
- ಪ್ರಾತ್ಯಕ್ಷಿಕೆಗಳಿಗೆ ಆಯ್ಕೆ ಮಾಡಲಾಗುವ ಫಲಾನುಭವಿಗಳ ವಿವರಗಳನ್ನು ಹಾಗೂ GPS co-ordinate ಸಹಿತ ಪೋಟೊ ದಾಖಲಾತಿಯನ್ನು Mobile & Web portal ಮೂಲಕ ನಿರ್ವಹಿಸುವುದು.
- ಈ ಮೂಲಕ ಪ್ರಾತ್ಯಕ್ಷಿಕೆಗಳ ನಿರ್ವಹಣೆಗೆ ಜಿಲ್ಲಾ ಮಟ್ಟದಲ್ಲಿ ನೋಡಲ್ ಮತ್ತು ಸಹಾಯಕ ನೋಡಲ್ ಅಧಿಕಾರಿಗಳನ್ನು ನಿಯೋಜಿಸಿ ಮಾಹಿತಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.
- ಪ್ರಾತ್ಯಕ್ಷಿಕೆ ಮಾಹಿತಿಯನ್ನು ಆಯಾ ಹಂಗಾಮಿನಲ್ಲಿ ಸಕಾಲದಲ್ಲಿ ಹಾಗೂ ನಿಯತಕಾಲಿಕವಾಗಿ Mobile & Web portal ನಲ್ಲಿ ಅಪ್ ಲೋಡ್ ಮಾಡಲು ಕ್ರಮ ವಹಿಸುವುದು.

***ಸೂಚನೆ:***

I. ಎನ್.ಎಫ್.ಎಸ್.ಎಂ-ಎಣ್ಣೆಕಾಳು ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ಗುಚ್ಛ ಪ್ರಾತ್ಯಕ್ಷಿಕೆಗಳ ಚಟುವಟಿಕೆಗಳು ಮತ್ತು ವೆಚ್ಚವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

II. ಕ್ಷೇತ್ರೋತ್ಸವ, ಪ್ರಚಾರ, ಪ್ರಾತ್ಯಕ್ಷತೆ ತಾಕುಗಳಿಗೆ ವಿಜ್ಞಾನಿಗಳ ಭೇಟಿ ಕಾರ್ಯಕ್ರಮವನ್ನು NFSM-ಇತರೆ ಬೆಳೆಗಳಲ್ಲಿ ಇರುವ ಮಾರ್ಗಸೂಚಿಯನ್ನು ಅನುಸರಿಸುವುದು

**ಆ) <u>ತರಬೇತಿಗಳು :</u>**

**1. ರೈತರ ತರಬೇತಿಗಳು**

| ಕ್ರ.ಸಂ | ಘಟಕಗಳು | ದರ | ಮೊತ್ತ(ರೂ) |
|---|---|---|---|
| 1 | ತರಬೇತಿ ಸಾಮಾಗ್ರಿಗಳು, ಶ್ರವಣ ದೃಶ್ಯ ಸಾಮಾಗ್ರಿಗಳು /ಸಭಾಂಗಣ ವೆಚ್ಚ | **ರೂ**.2500/ತರಬೇತಿ | 2500.00 |
| 2 | ರೈತರಿಗೆ ಪ್ರಯಾಣ/ಸಾರಿಗೆ ವೆಚ್ಚ | **ರೂ**.4500/ತರಬೇತಿ | 4500.00 |
| 3 | ವಿಷಯ ತಜ್ಞರಿಗೆ ಗೌರವ ಧನ | **ರೂ**.250/ಉಪನ್ಯಾಸ (2 ದಿನ 8 ಉಪನ್ಯಾಸ) | 2000.00 |
| 4 | ಊಟ/ ಉಪಹಾರ/ ಟೀ.ಕಾಫಿ ವೆಚ್ಚ | **ರೂ**. 250/ದಿನX2 ದಿನ X30 ರೈತರು | 15000.00 |
| | ಒಟ್ಟು | | 24000.00 |

**2. ಅಧಿಕಾರಿಗಳ ತರಬೇತಿಗಳು**

| ಕ್ರ.ಸಂ | ಘಟಕಗಳು | ದರ | ಮೊತ್ತ(ರೂ) |
|---|---|---|---|
| 1 | ತರಬೇತಿ ಸಾಮಾಗ್ರಿಗಳು | ರೂ.5000/ತರಬೇತಿ | 5000.00 |
| 2 | ವಾಹನ ಬಾಡಿಗೆ/ಇಂಧನ ವೆಚ್ಚ | ರೂ. 15000/ತರಬೇತಿ | 15000.00 |
| 3 | ವಿಷಯ ತಜ್ಞರಿಗೆ ಗೌರವಧನ | ರೂ.500/ಉಪನ್ಯಾಸ (2 ದಿನ 8 ಉಪನ್ಯಾಸ) | 4000.00 |
| 4 | ಊಟ/ ಉಪಹಾರ/ ಟೀ. ಕಾಫಿ ವೆಚ್ಚ | ರೂ.300/ದಿನ X 2 ದಿನ X 20 ಅಧಿಕಾರಿಗಳು | 12000.00 |
| | **ಒಟ್ಟು** | | **36000.00** |

### III. <u>ಉತ್ಪಾದನಾ ಪರಿಕರಗಳ ವಿತರಣೆ</u>

**1. ಜಿಪ್ಸಂ/ಪೈರೇಟ್ಸ್/ಕೃಷಿಸುಣ್ಣ/ಡೊಲೊಮೈಟ್/ಎಸ್.ಎಸ್.ಪಿ ವಿತರಣೆ**

ಈ ಕಾರ್ಯಕ್ರಮದ ಮೂಲಕ ಎಣ್ಣೆಕಾಳು ಬೆಳೆಗಳಲ್ಲಿ ಅದರಲ್ಲೂ ಮುಖ್ಯವಾಗಿ ನೆಲಗಡಲೆ ಬೆಳೆಗೆ ಜಿಪ್ಸಂ ಲವಣವನ್ನು ಸರಬರಾಜು ಮಾಡಲಾಗುವುದು. ಜಿಪ್ಸಂ ಸರಬರಾಜಿನಲ್ಲಿ ಸಾಗಾಣಿಕೆ ವೆಚ್ಚವು ಅತೀ ಹೆಚ್ಚಾಗಿರುವುದರಿಂದ ಸಾಗಾಣಿಕೆ ವೆಚ್ಚದ ಭಾರವನ್ನು ರೈತರಿಗೆ ಕಡಿಮೆ ಮಾಡಲು ಈ ಪರಿಕರದ ಬೆಲೆಯ ಶೇಕಡ 50 ರಷ್ಟನ್ನು (ಸಾಗಾಣಿಕೆ ವೆಚ್ಚವೂ ಸೇರಿ) ಗರಿಷ್ಠ ರೂ. 750/- ಕ್ಕೆ ಮಿತಿಗೊಳಿಸಿ ಪ್ರತಿ ಹೆಕ್ಟೇರ್ ಗೆ ಸಹಾಯಧನವನ್ನು ಒದಗಿಸಲಾಗುವುದು. ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಾಗ 10 ಹೆ ವಿಸ್ತೀರ್ಣ ಸಾಧ್ಯವಾದ ಮಟ್ಟಿಗೆ ಒಂದೇ ತಾಕಿನಲ್ಲಿ ಬರುವಂತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

**2. ರೈಜೋಬಿಯಂ, ಪಿ. ಎಸ್.ಬಿ., ಮೈಕೋರೈಝಾ/Z.S.B ಜೈವಿಕ ಗೊಬ್ಬರಗಳ ವಿತರಣೆ:**

ನೆಲಗಡಲೆ ಮತ್ತು ಸೋಯಾ ಅವರೆಗಳ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ರೈಜೋಬಿಯಂ ಹಾಗೂ ಎಣ್ಣೆಕಾಳು ಬೆಳೆಗಳಿಗೆ ಪಿ,ಎಸ್.ಬಿ ಜೀವಾಣುಗಳ ವಿತರಣೆಯನ್ನು ಶೇ 50ರ ಬೆಲೆಯ ಅಥವಾ ಹೆಕ್ಟೇರ್ ಒಂದಕ್ಕೆ ಗರಿಷ್ಠ 300/- ರೂ. ಗಳ ಸಹಾಯಧನದಡಿ ವಿತರಿಸುವುದು. ರೈಜೋಬಿಯಂ ವಾತಾವರಣದಲ್ಲಿರುವ ಸಾರಜನಕವನ್ನು ಹಾಗೂ ಪಿ,ಎಸ್.ಬಿ ಜೀವಾಣು ಭೂಮಿಯಲ್ಲಿರುವ ರಂಜಕವನ್ನು ಕರಗದ ಸ್ಥಿತಿಯಿಂದ ಕರಗುವ ಸ್ಥಿತಿಗೆ ತರಲು ಸಹಾಯ ಮಾಡುತ್ತದೆ. ಇದರಿಂದ ಇಳುವರಿ ಸಹ ಹೆಚ್ಚುತ್ತದೆ.

**3. ರಾಸಾಯನಿಕ ಪೀಡೆನಾಶಕ/ಎನ್.ಪಿ.ವಿ/ಜೈವಿಕಪೀಡೆನಾಶಕ/ಲಘು ಪೋಶಕಾಂಶಗಳ ವಿತರಣೆ.**

ರಾಸಾಯನಿಕ ಪೀಡೆನಾಶಕ/ಶಿಲೀಂಧ್ರನಾಶಕ/ ಜೈವಿಕ ಪೀಡೆನಾಶಕ / ಬಯೋ ಏಜೆಂಟ್ಸ್/ ಕಳೆನಾಶಕ/ ಲಘು ಪೋಷಕಾಂಶಗಳ ಸರಬರಾಜು ಔಷಧಿಗಳನ್ನು ಸರಬರಾಜು ಮಾಡಲು ಶೇ 50ರ ಸಹಾಯಧನದಲ್ಲಿ ಹೆ. ಗೆ ಗರಿಷ್ಠ ರೂ. 500/- ಗಳನ್ನು ಮೀರದಂತೆ ಸಹಾಯಧನವನ್ನು ಕಲ್ಪಿಸಲಾಗಿದೆ.

***<u>ಸೂಚನೆ:</u>*** ಸಮಗ್ರ ಪೋಷಕಾಂಶಗಳ ನಿರ್ವಹಣೆ ಮತ್ತು ಸಮಗ್ರ ಕೀಟ ನಿರ್ವಹಣೆಯಡಿ ಎಲ್ಲಾ ಕಾರ್ಯಕ್ರಮಗಳಡಿ ಕೆ-ಕಿಸಾನ್ ಪೋರ್ಟಲ್ ನಲ್ಲಿ ನೀಡಿದ ಆರ್ಥಿಕ ಹಾಗೂ ಭೌತಿಕ ಗುರಿಯನ್ವಯ ದಾಸ್ತಾನು ಖರೀದಿಸುವುದು. ವಿತರಿಸಲಾದ ದಾಸ್ತಾನನ್ನು ಸಹ ಕೆ-ಕಿಸಾನ್ ಪೋರ್ಟಲ್ ನಲ್ಲಿ ನಮೂದಿಸುವುದು.

**IV. ಸಸ್ಯ ಸಂರಕ್ಷಣಾ ಸಿಂಪರಣಾ ಉಪಕರಣಗಳು ಹಾಗೂ ಸುಧಾರಿತ ಕೃಷಿ ಉಪಕರಣಗಳ ವಿತರಣೆ:**

- ✓ **ಶಕ್ತಿ ಚಾಲಿತ ಸಿಂಪರಣಾ ಉಪಕರಣ:** ರೈತರಿಗೆ 16 ಲೀಟರ್ ಸಾಮರ್ಥ್ಯಕ್ಕಿಂತ ಹೆಚ್ಚು ಶಕ್ತಿ ಚಾಲಿತ ಸಿಂಪರಣಾ ಉಪಕರಣ (2/4 ಸ್ಟ್ರೋಕ್) ಶೇ 40 /50 ರ ದರ ಅಥವಾ ಗರಿಷ್ಠ ರೂ. 10000/- ಗಳು ಯಾವುದು ಕಡಿಮೆಯೋ ಅದರಂತೆ ಸಹಾಯಧನ ನೀಡಲಾಗುವುದು.
- ✓ ಟ್ರಾಕ್ಟರ್ ಚಾಲಿತ ಕೃಷಿ ಉಪಕರಣಗಳು- ಎಣ್ಣೆಕಾಳು ಬೆಳೆಗಳಿಗೆ ಸೂಕ್ತವಾದ ಬಹು ಬೆಳೆ ಒಕ್ಕಣೆ ಯಂತ್ರ ಅಥವಾ ಕಾಯಿ ಬಿಡಿಸುವ ಯಂತ್ರ:

**ವಿಶೇಷ ಸೂಚನೆ:**

- ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಕೃಷಿ ಯಂತ್ರೋಪಕರಣಗಳು, ಶಕ್ತಿಚಾಲಿತ ಸಿಂಪರಣಾ ಉಪಕರಣಗಳನ್ನು ವಿತರಿಸುವುದು.
- ಶಕ್ತಿ ಚಾಲಿತ ಸಿಂಪರಣಾ ಉಪಕರಣ (2/4 ಸ್ಟ್ರೋಕ್) ಖರೀದಿಸುವಾಗ ನೇರವಾಗಿ ಸಂಸ್ಥೆಗಳಿಗೆ ಬೇಡಿಕೆ ಸಲ್ಲಿಸಿ ಖರೀದಿಸಬಾರದು. ರೈತರ ವಂತಿಕೆ ನೀಡಿದ ನಂತರ ಕಾರ್ಯಾದೇಶ ನೀಡಿ ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಸವಲತ್ತನ್ನು ವಿತರಿಸುವುದು.
- ಎನ್.ಎಫ್. ಎಸ್ .ಎಂ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುವುದರಿಂದ ರಿಯಾಯಿತಿ ದರವನ್ನು ಹಾಗೂ ವಿತರಣೆ ಪ್ರಕ್ರಿಯೆಯನ್ನು ಸಹ ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯ ಕಾರ್ಯಕ್ರಮದ ಮಾರ್ಗಸೂಚಿಯನ್ವಯ mobile App & k-kisan portal ಮೂಲಕ ವಿತರಿಸುವುದು.

**III. ನೀರು ಒದಗಿಸುವ ಪೈಪುಗಳು :**

ಸಂದಿಗ್ಧ ಪರಿಸ್ಥಿತಿಯಲ್ಲಿ ನೀರಾವರಿ ಮೂಲದಿಂದ ಬೆಳೆ ಪ್ರದೇಶಕ್ಕೆ ನೀರು ಒದಗಿಸಲು ಸಮರ್ಥ ನೀರಾವರಿ ಘಟಕಗಳಡಿ ನೀರು ಒದಗಿಸುವ ಪೈಪುಗಳ ವಿತರಣೆಗೆ ಅವಕಾಶ ಕಲ್ಪಿಸಲಾಗಿದೆ. ಈ ಘಟಕದಡಿ *PVC pipe/HDPE pipes/HDPE laminated woven flat tubes ಖರೀದಿಸಬಹುದಾಗಿದೆ. ಇಲಾಖೆಯಿಂದ HDPE laminated woven flat tubes ಧರ ಕರಾರು ನೀಡಲಾಗಿದ್ದು ಅದರಂತೆ ಕ್ರಮವಹಿಸುವುದು.*

**IV. ಸಂಪನ್ಮೂಲ ಸಂರಕ್ಷಣಾ ತಾಂತ್ರಿಕತೆಗಳು (Flexi components)**

1. **ಸಣ್ಣ ಪ್ರಮಾಣದ ಎಣ್ಣೆಗಾಣಗಳು/** ಮೋಟಾರ್ **ಚಾಲಿತ ಸಣ್ಣ ಪ್ರಮಾಣದ ಎಣ್ಣೆಗಾಣಗಳು (0.5 ರಿಂದ 5 HP) :** ಸ್ಥಳೀಯವಾಗಿ ಉದ್ಯೋಗಾವಕಾಶ ಕಲ್ಪಿಸಲು ಹಾಗೂ ಶುದ್ಧ ಖಾದ್ಯ ತೈಲ ಉಪಯೋಗಿಸಲು ಅನುಕೂಲವಾಗುವಂತೆ ಪ್ರೇರೇಪಿಸಲು ಸೂಕ್ತವಾಗುವಂತೆ ಸಣ್ಣ ಪ್ರಮಾಣದ

ಎಣ್ಣೆಗಾಣಗಳು/ ಮೋಟಾರ್ ಚಾಲಿತ ಸಣ್ಣ ಪ್ರಮಾಣದ ಎಣ್ಣೆಗಾಣಗಳು (5 HP) ವಿತರಣೆಗೆ ಅವಕಾಶ ಕಲ್ಪಿಸಿದ್ದು , ಈ ಕುರಿತು ವ್ಯಾಪಕ ಪ್ರಚಾರ ನೀಡುವುದು.

2. **ಡೀಸೆಲ್ ಪಂಪ್ ಸೆಟ್ (5 ಹೆಚ್.ಪಿ ವರೆಗೆ)** ಶೇ 50 ರ ರಿಯಾಯಿತಿ ದರದಲ್ಲಿ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ.

3. **ಶೇಂಗಾ ಡಿಗ್ಗರ್ :** ಕಟಾವು ಸಮಯದಲ್ಲಿ ಅನುಕೂಲವಾಗುವಂತೆ ವಿತರಕರಿಂದ ಆಸಕ್ತ ರೈತರಿಗೆ ಶೇಂಗಾ ಡಿಗ್ಗರ್ ಪ್ರಾತ್ಯಕ್ಷತೆ ಏರ್ಪಡಿಸುವುದು ಹಾಗೂ ಖರೀದಿಸಲು ಸೂಕ್ತ ವೇದಿಕೆ ಕಲ್ಪಿಸುವುದು.

**4. ಸೂಪರ್ ಕಾಳು ಶೇಖರಣಾ ಚೀಲಗಳು (50 ಕೆ.ಜಿ):** ಎಣ್ಣೆಕಾಳುಗಳನ್ನು ಬಿತ್ತನೆಗಾಗಿ ಶೇಖರಿಸಿಡಲು ಅನುಕೂಲವಾಗುವಂತೆ ಸೂಪರ್ ಕಾಳು ಶೇಖರಣಾ ಚೀಲಗಳು(50 ಕೆ.ಜಿ) ವಿತರಣೆಗೆ ಅವಕಾಶ ಕಲ್ಪಿಸಲಾಗಿದೆ. ಇವುಗಳನ್ನು ಆದ್ಯತೆಯ ಮೇರೆಗೆ ಪ್ರಾತ್ಯಕ್ಷತೆಯ ಫಲಾನುವಿಗಳಿಗೆ ಅಧಿಕ ಇಳುವರಿ ನೀಡುವ ತಳಿಗಳ ಬಿತ್ತನೆ ಬೀಜದ ಶೇಖರಣೆಗಾಗಿ ಬಳಸಲು ಸೂಕ್ತವಾಗುವಂತೆ ವಿತರಿಸುವುದು.

**ಲಗತ್ತು :**

1) ಅನುಬಂಧ-1: ಎನ್.ಎಫ್.ಎಸ್.ಎಂ ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ವಿವಿಧ ಪರಿಕರಗಳ ವಿತರಣೆಗೆ ಸಹಾಯಧನ ವಿವರ
2) ಅನುಬಂಧ-2: ವಿವಿಧ ಕಾರ್ಯಕ್ರಮಗಳಡಿ ಪ್ರಾತ್ಯಕ್ಷಿಕೆಗಳಿಗೆ ಮಾಡಬಹುದಾದ ವೆಚ್ಚ ಮತ್ತು ಪ್ರೇರಕಗಳ ಬಗ್ಗೆ ವಿವರಗಳು.
3) ಅನುಬಂಧ-3: ವಿವಿಧ ಪ್ರಾತ್ಯಕ್ಷಿಕೆಗಳಿಗೆ ನೀಡಬೇಕಾದ ಪರಿಕರಗಳು ಹಾಗೂ ವೇಳಾಪಟ್ಟಿ
4) ಅನುಬಂಧ-4: ಎನ್. ಎಫ್.ಎಸ್.ಎಂ ಯೋಜನೆಯ ವಿವಿಧ ಕಾರ್ಯಕ್ರಮಗಳ ಜಿಲ್ಲಾವಾರು ಘಟಕವಾರು ಕ್ರಿಯಾಯೋಜನೆಯ ಘೋಷ್ವಾರೆ.
5) ಅನುಬಂಧ-4 (A): ಎನ್.ಎಫ್.ಎಸ್.ಎಂ ಯೋಜನೆಯ ವಿವಿಧ ಕಾರ್ಯಕ್ರಮಗಳ ಜಿಲ್ಲಾವಾರು, ಘಟಕವಾರು, ವರ್ಗವಾರು ವಿವರವಾದ ಕ್ರಿಯಾಯೋಜನೆ.

2021-22 ನೇ ಸಾಲಿನ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ- ಎನ್.ಎಫ್.ಎಸ್.ಎಂ - ಎಣ್ಣೆಕಾಳು ಬೆಳೆಗಳ ಜಿಲ್ಲಾ ಕ್ರಿಯಾ ಯೋಜನೆಯನ್ನು ಮೇಲಿನ ಮಾರ್ಗಸೂಚಿಯನ್ವಯ ಅನುಷ್ಠಾನ ಮಾಡಿ, ಪ್ರತಿ ತಿಂಗಳ 5 ನೇ ತಾರೀಖಿನೊಳಗೆ ಪ್ರಗತಿ ವರದಿ ಸಲ್ಲಿಸಲು ಸೂಚಿಸಿದೆ

**ಕೃಷಿ ನಿರ್ದೇಶಕರು**

## ಅನುಬಂಧ-2: 2021-22 ನೇ ಸಾಲಿನ ಎನ್.ಎಫ್.ಎಸ್.ಎಂ (ಎಣ್ಣೆಕಾಳು) ಯೋಜನೆಯಡಿ ವಿವಿಧ ಪರಿಕರಗಳ ವಿತರಣೆಗೆ ಸಹಾಯಧನ ವಿವರ

| ತಾಂತ್ರಿಕತೆಯ ಹೆಸರು | ಬಿತ್ತನೆ ಬೀಜ | ಕಿಟ್-1 | | | ಕಿಟ್-2 | | | ಒಟ್ಟು ಮೊತ್ತ | ಪ್ರಚಾರ, ಕ್ಷೇತ್ರೋತ್ಸವ ಮತ್ತು ಇತರೆ ವೆಚ್ಚ | ಒಟ್ಟು ಮೊತ್ತ ರೂ/ಹೆ |
|---|---|---|---|---|---|---|---|---|---|---|
| | | ಬೀಜೋಪಚಾರ ಔಷಧಿ | ಜೈವಿಕ ಗೊಬ್ಬರ/ ಸಾವಯವ ಗೊಬ್ಬರ / ಜಿಪ್ಸಂ/ ಲಘು ಪೋಷ ಕಾಂಶಗಳು | ಕಿಟ್ – 1 ಒಟ್ಟು ಮೊತ್ತ | ಕೀಟನಾಶಕ / ಕಳೆನಾಶಕ / ಮೋಹಕ ಬಲೆಗಳು | ಎಲೆಗಳ ಮೇಲೆ ಪೋಷ ಕಾಂಶಗಳ ಸಿಂಪರಣೆ | ಕಿಟ್ – 2 ಒಟ್ಟು ಮೊತ್ತ | | | |
| ಗುಚ್ಛ ಪ್ರಾತ್ಯಕ್ಷಿಕೆ –ನೆಲಗಡಲೆ | 5500 | 0 | 2000 | 2000 | 1500 | 500 | 2000 | **4000** | 500 | **10000** |
| ಗುಚ್ಛ ಪ್ರಾತ್ಯಕ್ಷಿಕೆ –ಸೋಯಾಬೀನ್ | 2700 | 0 | 1200 | 1200 | 1200 | 500 | 1700 | **2900** | 400 | **6000** |
| ಗುಚ್ಛ ಪ್ರಾತ್ಯಕ್ಷಿಕೆ ಸೂರ್ಯಕಾಂತಿ | 880 | 200 | 1020 | 1220 | 1000 | 500 | 1500 | **2720** | 400 | **4000** |
| ಗುಚ್ಛ ಪ್ರಾತ್ಯಕ್ಷಿಕೆ ಎಳ್ಳು / ಅಗಸೆ / ಕುಸುಬೆ | 600 | 0 | 1000 | 1000 | 1100 | 0 | 1100 | **2100** | 300 | **3000** |
| ಗುಚ್ಛ ಪ್ರಾತ್ಯಕ್ಷಿಕೆ ಗುರೆಳ್ಳು | 1250 | 0 | 750 | 750 | 750 | 0 | 750 | **1500** | 250 | **3000** |
| ಗುಚ್ಛ ಪ್ರಾತ್ಯಕ್ಷಿಕೆ ಹರಳು | 750 | 0 | 850 | 850 | 1000 | 0 | 1000 | **1850** | 400 | **3000** |
| ಗುಚ್ಛ ಪ್ರಾತ್ಯಕ್ಷಿಕೆ + ಸೂರ್ಯಕಾಂತಿ ಜೇನು ಪಟ್ಟಿಗೆ | 880 | 200 | 1020 | 1220 | 1000 | 500 | 1500 | **2720** | 400 | **6000*** |
| ಮುಂಗಾರು ಬೆಳೆ | ಜುಲೈ 15 ಕ್ಕೆ ಅಂತಿಮಗೊಳಿಸುವುದು | | | | ಆಗಸ್ಟ್ 15 ಕ್ಕೆ ಅಂತಿಮಗೊಳಿಸುವುದು | | | | | |
| * ಹಿಂಗಾರು ಬೆಳೆ | ಅಕ್ಟೋಬರ್ ಅಂತ್ಯಕ್ಕೆ ಅಂತಿಮಗೊಳಿಸುವುದು | | | | ನವೆಂಬರ್ ಅಂತ್ಯಕ್ಕೆ ಅಂತಿಮಗೊಳಿಸುವುದು | | | | | |

ಸೂಚನೆ: 1. ರಾಜ್ಯದ ಅನುಮೋದಿತ ದರಗಳನ್ವಯ ಬಿತ್ತನೆ ಬೀಜದಲ್ಲಿ ಶೇ.50 ರಷ್ಟು ಭರಿಸುವುದು

2.ಸೂರ್ಯಕಾಂತಿ + ಜೇನು ಪಟ್ಟಿಗೆ ಗುಚ್ಛ ಪ್ರಾತ್ಯಕ್ಷತೆಯಲ್ಲಿ ಜೇನು ಪೆಟ್ಟಿಗೆ ಖರೀದಿಸಿದ ರೈತರಿಗೆ ರೂ. 2000/- ನೇರವಾಗಿ ಸಹಾಯಧನ ವರ್ಗಾಯಿಸಲಾಗುವುದು

**ಕೃಷಿ ನಿರ್ದೇಶಕರು**

<u>ಅನುಬಂಧ-1</u>

**2021-22 ನೇ ಸಾಲಿನ ಎನ್. ಎಫ್.ಎಸ್.ಎಂ (ಎಣ್ಣೆಕಾಳು) ಯೋಜನೆಯಡಿ ವಿವಿಧ ಪರಿಕರಗಳ ವಿತರಣೆಗೆ ಸಹಾಯಧನ ವಿವರ**

| ಕ್ರ. ಸಂ | ಘಟಕ | ಶೇ. 50 ರ ಅನುಮೋದಿತ ಗರಿಷ್ಠ ಸಹಾಯಧನ |
|---|---|---|
| 1 | **ಸಮಗ್ರ ಪೋಷಕಾಂಶ ನಿರ್ವಹಣೆ** | |
| | ಅ) ಜಿಪ್ಸಂ/ಪೈರೇಟ್ಸ್/ಕೃಷಿ ಸುಣ್ಣ/ಡೊಲೊಮೈಟ್ /ಎಸ್.ಎಸ್.ಪಿ | ಪ್ರತಿ ಹೆಕ್ಟೇರ್ ಗೆ ರೂ.750/- |
| | ಆ) ಲಘುಪೋಶಕಾಂಶಗಳ ವಿತರಣೆ | ಪ್ರತಿ ಹೆಕ್ಟೇರ್ ಗೆ ರೂ.500/- |
| | ಇ) ಜೈವಿಕ ಗೊಬ್ಬರಗಳು: ರೈಜೋಬಿಯಂ/ ಪಿ.ಎಸ್ ಬಿ/ ಮೈಕೋರೈಜಾ/Z.S.B | ಪ್ರತಿ ಹೆಕ್ಟೇರ್ ಗೆ ರೂ.300/- |
| 2 | **ಸಸ್ಯ ಸಂರಕ್ಷಣೆ ನಿರ್ವಹಣೆ** | |
| | ಅ) ಸಸ್ಯ ಸಂರಕ್ಷಣಾ ಔಷಧಿಗಳು /ಕಳೆನಾಶಕಗಳು ಇತ್ಯಾದಿ | ಪ್ರತಿ ಹೆಕ್ಟೇರ್ ಗೆ ರೂ.500/- |
| | ಆ) ಎನ್.ಪಿ.ವಿ | ಪ್ರತಿ ಹೆಕ್ಟೇರ್ ಗೆ ರೂ.500/- |
| 3 | **ಸಂಪನ್ಮೂಲ ಸಂರಕ್ಷಣಾ ತಾಂತ್ರಿಕತೆಗಳು/ ಸಾಧನಗಳು** | |
| | ಅ) **ಶಕ್ತಿಚಾಲಿತ ಸಿಂಪರಣಾ ಉಪಕರಣ:** ರೈತರಿಗೆ 16 ಲೀಟರ್ ಸಾಮರ್ಥ್ಯಕ್ಕಿಂತ ಹೆಚ್ಚು ಶಕ್ತಿಚಾಲಿತ ಸಿಂಪರಣಾ ಉಪಕರಣ (2/4 ಸ್ಟ್ರೋಕ್ ) | ಪ್ರತಿ ಘಟಕಕ್ಕೆ ರೂ. 8000/-ರಿಂದ 10000/- |
| 4 | **ಸುಧಾರಿತ ಕೃಷಿ ಯಂತ್ರೋಪಕರಣಗಳು** | |
| | ಅ) ಟ್ರಾಕ್ಟರ್ ಚಾಲಿತ ಕೃಷಿ ಉಪಕರಣಗಳು- ಎಣ್ಣೆಕಾಳು ಬೆಳೆಗಳಿಗೆ ಸೂಕ್ತವಾದ ಬಹು ಬೆಳೆ ಒಕ್ಕಣೆಯಂತ್ರ ಅಥವಾ ಕಾಯಿ ಬಿಡಿಸುವ ಯಂತ್ರ: | ಪ್ರತಿ ಘಟಕಕ್ಕೆ ಗರಿಷ್ಠ ರೂ.100000/- |
| | ಆ) *PVC pipe /HDPE pipes / HDPE laminated woven flat tubes.* | ಪ್ರತಿ ಘಟಕಕ್ಕೆ ರೂ.35/ಪ್ರತಿ 50/20 ಮೀ.<br>* *ಇಲಾಖೆಯಿಂದ HDPE laminated woven flat tubes ಧರ ಕರಾರು ನೀಡಲಾಗಿದ್ದು ಅದರಂತೆ ಕ್ರಮವಹಿಸುವುದು* |
| 5 | **ಸಂಪನ್ಮೂಲ ಸಂರಕ್ಷಣಾ ತಾಂತ್ರಿಕತೆಗಳು (*Flexi Components*)** | |
| | ಅ) ಸಣ್ಣ ಪ್ರಮಾಣದ ಎಣ್ಣೆಗಾಣಗಳು (0.5 ರಿಂದ 2 HP | |

| | | |
|---|---|---|
| | ರವರೆಗೆ) | |
| | ಆ) ಮೋಟಾರ್ ಚಾಲಿತ ಸಣ್ಣ ಪ್ರಮಾಣದ ಎಣ್ಣೆಗಾಣಗಳು( 5 HP) | ಪ್ರತಿ ಘಟಕಕ್ಕೆ ರೂ. 72500 ರಿಂದ 100000/- ಯಾವುದು |
| | ಇ) ಶೇಂಗಾ ಡಿಗ್ಗರ್ | ಪ್ರತಿ ಘಟಕಕ್ಕೆ ರೂ. 72500 ರಿಂದ 100000/- |
| | ಈ) ಸೂಪರ್ ಕಾಳು ಶೇಖರಣಾ ಚೀಲಗಳು (50 ಕೆ.ಜಿ) | ಪ್ರತಿ ಘಟಕಕ್ಕೆ ರೂ. 120/- |
| | ಉ) ಡೀಸೆಲ್ ಪಂಪ್ ಸೆಟ್ | ಪ್ರತಿ ಘಟಕಕ್ಕೆ ರೂ. 8000 ರಿಂದ 10000/- |

- ✓ ಸೂಚನೆ: ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಕೃಷಿ ಯಂತ್ರೋಪಕರಣಗಳು, ಶಕ್ತಿಚಾಲಿತ ಸಿಂಪರಣಾ ಉಪಕರಣಗಳನ್ನು ವಿತರಿಸುವುದು.
- ✓ ಫಲಾನುಭವಿಗಳ ಆಯ್ಕೆ ಹಾಗೂ ದಾಖಲಾತಿಯನ್ನು k-kisan portal ನಲ್ಲಿ ನಿರ್ವಹಿಸುವುದು.
- ✓ ಶೇ.50 ರಷ್ಟು ಅಥವಾ ಗರಿಷ್ಟ ಮೊತ್ತ , ಇದರಲ್ಲಿ ಯಾವುದು ಕಡಿಮೆಯೋ ಅದು.

**ಕೃಷಿ ನಿರ್ದೇಶಕರು**

## ಅನುಬಂಧ-1

**ಎನ್.ಎಫ್.ಎಸ್.ಎಂ(ಎಣ್ಣೆಕಾಳು) ಯೋಜನೆಯ ವಿವಿಧ ಬೆಳೆಗಳಲ್ಲಿ ಗುಚ್ಚ ಪ್ರಾತ್ಯಕ್ಷಿಕೆಗಳು: ಚಟುವಟಿಕೆಗಳು ಮತ್ತು ವೆಚ್ಚ.**

**1. ನೆಲಗಡಲೆ ಪ್ರಾತ್ಯಕ್ಷಿಕೆ :**

(ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ ರೂ.10000/-)

| ಕ್ರ.ಸಂ | ಪರಿಕರಗಳು | ಸಹಾಯಧನದ ಮೊತ್ತ (ರೂ.) |
|---|---|---|
| 1. | ಬಿತ್ತನೆ ಬೀಜ (110 ಕೆ.ಜಿ) ರೂ.50/ಕೆ.ಜಿ | 5500.00 |
| 2. | ಜೈವಿಕಗೊಬ್ಬರ, ಲಘು ಪೊಷಕಾಂಶಗಳು, ಸಾವಯವ ಗೊಬ್ಬರ ಮತ್ತು ಜಿಪ್ಸಂ | 2000.00 |
| 3. | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | 500.00 |
| 4. | ಕಳೆನಾಶಕ, ಕೀಟನಾಶಕ ಮತ್ತು ಮೋಹಕ ಬಲೆಗಳು | 1500.00 |
| 5. | ಪ್ರಚಾರ/ಕ್ಷೇತ್ರೋತ್ಸವ/ ನಾಮಫಲಕ/ಇತರೆ ವೆಚ್ಚ | 500.00 |
| | **ಒಟ್ಟು** | **10000.00** |

**2. ಸೋಯಾಅವರೆ ಪ್ರಾತ್ಯಕ್ಷಿಕೆ :**

(ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ ರೂ.6000/-)

| ಕ್ರ.ಸಂ | ಪರಿಕರಗಳು | ಸಹಾಯಧನದ ಮೊತ್ತ(ರೂ.) |
|---|---|---|
| 1. | ಬಿತ್ತನೆ ಬೀಜ(75ಕೆ.ಜಿ-ರೂ.36/ಕೆ.ಜಿ) | 2700.00 |
| 2. | ಜೈವಿಕಗೊಬ್ಬರ, ಲಘು ಪೊಷಕಾಂಶಗಳು ಮತ್ತು ಸಾವಯವ ಗೊಬ್ಬರ | 1200.00 |
| 3. | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | 500.00 |
| 4. | ಕಳೆನಾಶಕ, ಕೀಟನಾಶಕ ಮತ್ತು ಮೋಹಕ ಬಲೆಗಳು | 1200.00 |
| 5. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಇತರೆ ವೆಚ್ಚ | 400.00 |
| | **ಒಟ್ಟು** | **6000.00** |

**3. ಸೂರ್ಯಕಾಂತಿ ಪ್ರಾತ್ಯಕ್ಷಿಕೆ:**
(ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ ರೂ.4000/-)

| ಕ್ರ. ಸಂ | ಪರಿಕರಗಳು | ಸಹಾಯಧನದ ಮೊತ್ತ (ರೂ.) |
|---|---|---|
| 1. | ಬಿತ್ತನೆ ಬೀಜ (4 ಕೆ.ಜಿ-ರೂ.220/ಕೆ.ಜಿ) | 880.00 |
| 2. | ಬೀಜೋಪಚಾರ ಔಷಧಿ | 200.00 |
| 3. | ಜೈವಿಕಗೊಬ್ಬರ, ಲಘು ಪೋಷಕಾಂಶಗಳು ಮತ್ತು ಸಾವಯವ ಗೊಬ್ಬರ | 1020.00 |
| 4. | ಎಲೆ ಮೇಲೆ ಸಿಂಪಡಿಸುವ ಪೋಷಕಾಂಶಗಳು | 500.00 |
| 5. | ಕಳೆನಾಶಕ, ಕೀಟನಾಶಕ ಮತ್ತು ಮೋಹಕ ಬಲೆಗಳು | 1000.00 |
| 6. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಇತರೆ ವೆಚ್ಚ | 400.00 |
| 7 | ಪರಗಾಸ್ಪರ್ಶಕ್ಕಾಗಿ ಜೇನು ಪೆಟ್ಟಿಗೆ ಇಟ್ಟಲ್ಲಿ ರೂ.2000/- ಪ್ರತಿ ಹೆ.ಗೆ ಪ್ರತ್ಯೇಕ ವಾಗಿ ನೀಡಲಾಗುವುದು | * |
| | **ಒಟ್ಟು** | **4000.00** |

* ಸೂರ್ಯಕಾಂತಿ + ಜೇನು ಪಟ್ಟಿಗೆ ಗುಚ್ಛ ಪ್ರಾತ್ಯಕ್ಷತೆಯಲ್ಲಿ ಜೇನು ಪೆಟ್ಟಿಗೆ ಖರೀದಿಸಿದ ರೈತರಿಗೆ ರೂ. 2000/- ನೇರವಾಗಿ ಸಹಾಯಧನ ವರ್ಗಾಯಿಸಲಾಗುವುದು

**4. ಎಳ್ಳು/ ಗುರೆಳ್ಳು ಪ್ರಾತ್ಯಕ್ಷಿಕೆ:**
(ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ ರೂ. 3000/-)

| ಕ್ರ.ಸಂ | ಪರಿಕರಗಳು | ಸಹಾಯಧನದ ಮೊತ್ತ (ರೂ.) |
|---|---|---|
| 1. | ಬಿತ್ತನೆ ಬೀಜ (1-1.5 /4-5 ಕೆ.ಜಿ) | 600.00 |
| 2. | ಜೈವಿಕಗೊಬ್ಬರ, ಲಘು ಪೋಷಕಾಂಶಗಳು ಮತ್ತು ಸಾವಯವ ಗೊಬ್ಬರ | 1000.00 |
| 3. | ಕಳೆನಾಶಕ ಮತ್ತು ಕೀಟನಾಶಕ | 1100.00 |
| 4. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ, ಇತರೆ ವೆಚ್ಚ | 300.00 |
| | **ಒಟ್ಟು** | **3000.00** |

**5. ಅಗಸೆ ಪ್ರಾತ್ಯಕ್ಷಿಕೆ:**
(ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ ರೂ.3000/-)

| ಕ್ರ.ಸಂ | ಪರಿಕರಗಳು | ಸಹಾಯಧನದ ಮೊತ್ತ (ರೂ.) |
|---|---|---|
| 1. | ಬಿತ್ತನೆ ಬೀಜ (20-25 ಕೆ.ಜಿ-ರೂ.75/ಕೆ.ಜಿ) | 750.00 |
| 2. | ಜೈವಿಕಗೊಬ್ಬರ, ಲಘು ಪೋಷಕಾಂಶಗಳು ಮತ್ತು ಸಾವಯವ ಗೊಬ್ಬರ | 1200.00 |
| 3. | ಕಳೆನಾಶಕ ಮತ್ತು ಕೀಟನಾಶಕ | 750.00 |
| 4. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ, ಇತರೆ ವೆಚ್ಚ | 300.00 |
| | **ಒಟ್ಟು** | **3000.00** |

### 6. ಕುಸುಬೆ ಪ್ರಾತ್ಯಕ್ಷಿಕೆ:

(ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ ರೂ.3000/-)

| ಕ್ರ.ಸಂ | ಪರಿಕರಗಳು | ಸಹಾಯಧನದ ಮೊತ್ತ (ರೂ.) |
|---|---|---|
| 1. | ಬಿತ್ತನೆ ಬೀಜ (10-15 ಕೆ.ಜಿ-ರೂ.65/ಕೆ.ಜಿ) | 975.00 |
| 2. | ಜೈವಿಕಗೊಬ್ಬರ, ಲಘು ಪೋಷಕಾಂಶಗಳು ಮತ್ತು ಸಾವಯವ ಗೊಬ್ಬರ | 1000.00 |
| 3. | ಕಳೆನಾಶಕ ಮತ್ತು ಕೀಟನಾಶಕ | 725.00 |
| 4. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ, ಇತರೆ ವೆಚ್ಚ | 300.00 |
| | **ಒಟ್ಟು** | **3000.00** |

### 7. ಹರಳು ಪ್ರಾತ್ಯಕ್ಷಿಕೆ:

(ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ ರೂ.3000/-)

| ಕ್ರ.ಸಂ | ಪರಿಕರಗಳು | ಸಹಾಯಧನದ ಮೊತ್ತ (ರೂ.) |
|---|---|---|
| 1. | ಬಿತ್ತನೆ ಬೀಜ (10-12ಕೆ.ಜಿ-ರೂ.100/ಕೆ.ಜಿ) | 750.00 |
| 2. | ಜೈವಿಕಗೊಬ್ಬರ, ಲಘು ಪೋಷಕಾಂಶಗಳು ಮತ್ತು ಸಾವಯವ ಗೊಬ್ಬರ | 850.00 |
| 3. | ಕಳೆನಾಶಕ, ಕೀಟನಾಶಕ ಮತ್ತು ಮೋಹಕ ಬಲೆಗಳು | 1000.00 |
| 4. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಇತರೆ ವೆಚ್ಚ | 400.00 |
| | **ಒಟ್ಟು** | **3000.00** |

**ಕೃಷಿ ನಿರ್ದೇಶಕರು**